aglasem.com

FOR KARNATAKA CLASS 12 PREPARATION

Karnataka 2nd PUC Model Question Paper 2027 for Kannada (Paper 3)

EXAM	YEAR	TYPE	SUBJECT
Karnataka Class 12	2027	Sample Paper	Kannada

ಕರ್ನಾಟಕ ಸರ್ಕಾರ

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ

6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560003

2026-27 ಸಾಲಿನ ದ್ವಿತೀಯ ಪಿಯುಸಿ ಮಾದರಿ ಪ್ರಶ್ನೆಪತ್ರಿಕೆ - 3

ವಿಷಯ: ಕನ್ನಡ (01) **ಗರಿಷ್ಠ ಅಂಕಗಳು: 80**

ಸಮಯ: 3 ಗಂಟೆಗಳು **ಒಟ್ಟು ಪ್ರಶ್ನೆಗಳ ಸಂಖ್ಯೆ: 52**

ಸೂಚನೆ: ೧. "ಅ-ವಿಭಾಗ"ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರವೇ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

ಅ-ವಿಭಾಗ

(ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ. (10x1=10)

1. ಸೀತೆಯು ತೃಣ ಸಮಾನವೆಂದು ಭಾವಿಸಿದ್ದು

   ಅ) ರಾವಣನ ರೂಪವನ್ನು ಆ) ಸೌಮಿತ್ರಿಯನ್ನು

   ಇ) ಖಚರ ಕಾಂತೆಯರನ್ನು ಈ) ರಘುತನೂಜನನ್ನು

2. ಯಾರ ಕೈಯಲ್ಲಿ ದರ್ಪಣವಿದ್ದು ಫಲವಿಲ್ಲ?

   ಅ) ಶಿವ ಆ) ಅಂಧಕ

   ಇ) ಮರ್ಕಟ ಈ) ಶಿವಶರಣ

3. ಯಾವುದನ್ನು ಗೆದ್ದವನನ್ನು ಯೋಗಿ ಎನ್ನಬಹುದು?

   ಅ) ಅರಿಷಡ್ವರ್ಗ ಆ) ಚಮತ್ಕಾರ

   ಇ) ಪಾಪ ಈ) ದುಃಖ

4. ಜಾಲಿಯ ರಸಾಸ್ವಾದ ಹೇಗಿರುತ್ತದೆ?

   ಅ) ಸಿಹಿಯಾಗಿ ಆ) ಹುಳಿಯಾಗಿ

   ಇ) ವಿಷದಂತೆ ಈ) ಉಪ್ಪಿನಂತೆ

5. "ಬಾನ್ ಹೊಗರಲುಂಟು, ಮರ ಚಿಗುರಲುಂಟು, ಬರಲುಂಟೆ ಸುಗ್ಗಿ ಮತ್ತೆ" -ಈ ಸಾಲುಗಳಲ್ಲಿ ಹೊಮ್ಮಿರುವ ಕವಿಯ ಭಾವವೆಂದರೆ.....

   ಅ) ಬಾನು ಮತ್ತು ಮರದ ನಿತ್ಯನೂತನತೆ ನಮಗಿಲ್ಲವೆಂಬುದು.

   ಆ) ಬದುಕಿನಲ್ಲಿ ನಿತ್ಯನೂತನತೆಯು ಸದಾ ಇರುತ್ತದೆಂಬುದು.

   ಇ) ಮುಪ್ಪು-ಚಿಂತನೆಗಳು ಸದಾ ಬಾಧಿಸವೆಂಬುದು.

   ಈ) ಹರೆಯ ಮತ್ತೆ ಮತ್ತೆ ಮರುಕಳಿಸುತ್ತದೆಂಬುದು.

6. ಬಸಲಿಂಗ ವೈದ್ಯರಿಗಾಗಿ ಅಲೆದಾಗ ಜೊತೆಗಿದ್ದ ರಾಜಕಾರಣಿ.

ಅ) ರುದ್ರಪ್ಪ ಆ) ಚಂದ್ರಪ್ಪ

ಇ) ತಿಮ್ಮಪ್ಪ ಈ) ಶಿವನೂರು ಸ್ವಾಮಿ

7. "ಪ್ರತಿಯೊಬ್ಬ ಕನ್ನಡಿಗನೂ ಪ್ರತಿಯೊಂದು ಅಂಗುಲದಲ್ಲಿಯೂ ಕನ್ನಡಿಗನಾಗಬೇಕು. ಆಗ ಮಾತ್ರ ಅನೇಕ ಸಮಸ್ಯೆಗಳಿಗೆ ಪರಿಹಾರ ದೊರಕುತ್ತದೆ." ಎಂದು ಹಾ. ಮಾ.ನಾ. ಹೇಳಿರುವುದರ ಸಾರ.....

ಅ) ಕನ್ನಡದ ಕೆಲಸಗಳಲ್ಲಿ ಸಾರ್ವಜನಿಕರ ಹೊಣೆಯೂ ಇರುತ್ತದೆ.

ಆ) ಕನ್ನಡದ ಕೆಲಸಗಳು ಸರ್ಕಾರದಿಂದ ಮಾತ್ರ ನಡೆಯಬೇಕು.

ಇ) ಜನಸಾಮಾನ್ಯರಿಗೂ ಕನ್ನಡಕ್ಕೂ ಸಂಬಂಧವಿಲ್ಲ.

ಈ) ಕನ್ನಡಿಗರು ಕನ್ನಡ ಕನ್ನಡ ಎಂದು ಹೋರಾಟ ಮಾಡಬಾರದು.

8. ಆನೆಯ ಮಾವುತನ ಹೆಸರು.

ಅ) ಶಿವೇಗೌಡ ಆ) ವೇಲಾಯುಧ

ಇ) ಕೃಷ್ಣೇಗೌಡ ಈ) ನಾಗರಾಜ

9. " ಅದು ಹೇಗೆ ಆನೆ ಕೆಲಸ ಅಂತೀಯ. ತಂತಿ ಮೇಲೆ ಕೊಂಬೆ ಎಳೆದರೆ ಅದಕ್ಕೆ ಕರೆಂಟ್ ಹೊಡೆದು ಸತ್ತೋಗೋದಿಲ್ವೇನೋ?" ಎಂಬ ನಿರೂಪಕರ ಮಾತಿನಲ್ಲಿ ವ್ಯಕ್ತವಾಗಿರುವ ಭಾವ....

ಅ) ದುರ್ಗಪ್ಪನ ಮಾತಿನ ಮೇಲಿನ ನಂಬಿಕೆ

ಆ) ದುರ್ಗಪ್ಪನ ಮಾತಿನ ಮೇಲಿನ ಅಪನಂಬಿಕೆ

ಇ) ಆನೆಯ ಮೇಲೆ ತಪ್ಪು ಹೊರಿಸಿದ್ದು ಸರಿ ಎಂಬ ಭಾವ.

ಈ) ದುರ್ಗಪ್ಪ ಚಾಡಿಕೋರನೆಂಬ ಭಾವನೆ.

10. ಟೆಲಿಫೋನ್ ಸಿಬ್ಬಂದಿ ಮುಷ್ಕರ ಹೂಡಿದ್ದು ಇವರ ವಿರುದ್ಧ.

ಅ) ಅರಣ್ಯ ಇಲಾಖೆ ಆ) ಲೋಕೋಪಯೋಗಿ ಇಲಾಖೆ

ಇ) ವಿದ್ಯುತ್ ಇಲಾಖೆ ಈ) ಕೃಷಿ ಇಲಾಖೆ

(ಆ) ಬಿಟ್ಟಸ್ಥಳಗಳಿಗೆ ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ. **(5x1=5)**

(ಚಂದ್ರಭವನ, ಶಾಂಭವಿ, ಪ್ರಶ್ನೆ ಕೇಳುವುದು, ಮನೋರಮೆ, ಪ್ಲೇವಿಯ, ಸೀತಾ)

11. ಅದೃಷ್ಟದ ಪ್ರಶ್ನೆ ಬಂದಾಗ ಲೇಖಕಿಗೆ ನೆನಪಾಗುವುದು .....

12. ಧಣಿಗಳ ಮನೆಯ ಪಕ್ಕದಲ್ಲಿ ಹರಿಯುತ್ತಿದ್ದ ಹೊಳೆ .....

13. ..... ವಿಜ್ಞಾನದ ಅಡಿಪಾಯವೆಂಬುದು ಕಲಾಂ ಅವರ ಅಭಿಪ್ರಾಯ.

14. ಕನ್ನಡವು ಕಸ್ತೂರಿಯಲ್ಲವೆ! ಎಂದವರು .....

15. ..... ಎಂಬುದು ಹಳ್ಳಿಯ ಚಹಾ ಹೋಟೆಲಿನ ಹೆಸರು.

(ಇ) 16. ಹೊಂದಿಸಿ ಬರೆಯಿರಿ. **(5x1=5)**

(ಅ) ಸೋಮೇಶ್ವರ ಶತಕ	೧) ಕೆ. ಎಸ್ ನಿಸಾರ್ ಅಹಮದ್
(ಆ) ಜಾಲಿಯ ಮರದಂತೆ	೨) ಟಿ. ಯಲ್ಲಪ್ಪ
(ಇ) ವ್ಯಕ್ತಿಪರ ಕವನಗಳು	೩) ನಾನೆಂಬ ಮಾಯೆ
(ಈ) ಹತ್ತಿ....ಚಿತ್ತ....ಮತ್ತು....	೪) ನಾಗಚಂದ್ರ
(ಊ) ಸುಕನ್ಯಾ ಮಾರುತಿ	೫) ಪಗೆಯಂ ಬಾಲಕನೆಂಬರೇ
	೬) ಕೀರ್ತನೆ

ಆ-ವಿಭಾಗ

(ಅ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. **(3x2=6)**

17. ಸೀತೆಯ ತಲ್ಲಣಕ್ಕೆ ಕಾರಣವೇನು?

18. ರಾಜ ಮತ್ತು ಮಂತ್ರಿಗಳಿಗೆ ಯಾವ ಅರ್ಹತೆಗಳಿರಬೇಕೆಂದು ಕವಿ ಹೇಳಿದ್ದಾನೆ?

19. ಕವಿ ಬೇಂದ್ರೆಯವರು ಹೇಳಿರುವಂತೆ ಮುಪ್ಪು ಮತ್ತು ಹರೆಯದ ನಡುವಿನ ವ್ಯತ್ಯಾಸವೇನು?

20. ಶಿಲುಬೆಗೇರಿಸಿದವರ ಗುಣಗಳು ಇಂದು ಯಾವ ವೇಷ ತಾಳಿವೆ?

(ಆ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. **(2x2=4)**

21. ಬಸಲಿಂಗನ ಹೆಂಡತಿ ಸಿದ್ಲಿಂಗಿ ಏನನ್ನು ಹೇಳುತ್ತಲೇ ಇದ್ದಳು?

22. ಹಾ.ಮಾ. ನಾಯಕರಲ್ಲಿ ಕನ್ನಡ ಪ್ರೀತಿ ಸ್ಫುರಿಸಿದ್ದು ಹೇಗೆ?

23. ಕಲಾಂ ಅವರು ಬಂಡೆಗಳ ಬಸಿರಲ್ಲಿ ಕಂಡದ್ದೇನು?

24. ರೋಗಿಗಳ ಹಾಗೂ ಪಥ್ಯ ಮಾಡುವವರ ಜಿದ್ದು ಎಂತಹುದು?

(ಇ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. **(3x2=6)**

25. ಸೊರಗಿದ್ದ ಆನೆಯನ್ನು ಕೃಷ್ಣೇಗೌಡ ಹೇಗೆ ಸಾಕಿದ?

26. ಫಾರೆಸ್ಟ್ ಡಿಪಾರ್ಟ್‌ಮೆಂಟಿನವರ ನಂಬರ್ ಒನ್ ಎನಿಮಿಗಳು ಯಾರು ಯಾರು?

27. ನಾಯಿ ಕಚ್ಚಿದ್ದೆಲ್ಲಿ ಎಂದಾಗ ಜಬ್ಬಾರ್ ಇರುಸುಮುರುಸಿನಿಂದ ಏನು ಹೇಳಿದನು?

28. ಆನೆಯನ್ನು ಹದ್ದುಬಸ್ತಿನಲ್ಲಿಡುವುದರ ಬಗ್ಗೆ ವೇಲಾಯುಧನ ಅಪ್ಪ ಏನು ತಿಳಿಸಿದ್ದ?

ಇ-ವಿಭಾಗ

(ಅ) ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. **(2x3=6)**

29. ಹಗೆಗಳನು ಹಿಂಡಿದನು ಮನದೊಳಗೆ.

30. ನೀ ತಂಪ ನನ್ನ ತವರೀಗಿ.

31. ಒಂದು ಹೂ ಹೆಚ್ಚಿಗೆ ಇಡುತೀನಿ ನಿನ್ನ ಗಟ್ಟಿಪಾದಕ್ಕೆ.

(ಆ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. (1x3=3)

32. ನೀರು ಬಿದ್ದರೆ ಕಣ್ಣು ಕೆಟ್ಟುಹೋಗುವ ಅಪಾಯ ಇದೆ.

33. 'ಅದೃಷ್ಟವನ್ನೇ' ಅವಲಂಬಿಸಿ ಬದುಕಲು ಸಾಧ್ಯವೇ?

34. ನೀರಿಳಿಯದ ಗಂಟಲೊಳ್ ಕಡುಬಂ ತುರುಕಿದಂತಾಯ್ತು.

(ಇ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. (1x3=3)

35. ವೆಪನ್ ಸಾರ್, ವೆಪನ್ ನಮಗೆ ಮುಖ್ಯ..

36. ಆನೆ ಬೇಲಿ ದಾಟಿ ಹೋಯ್ತು ಸಾರ್.

ಈ-ವಿಭಾಗ

(ಅ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. (2x4=8)

37. ರಾವಣನ ಮನಃಪರಿವರ್ತನೆಯ ಸಂದರ್ಭವನ್ನು ಕವಿ ಹೇಗೆ ಚಿತ್ರಿಸಿದ್ದಾನೆ?

38. ದ್ರೌಪದಿ ಅವಮಾನಕ್ಕೊಳಗಾದ ಮೂರು ಪ್ರಸಂಗಗಳು ಯಾವುವು?ವಿವರಿಸಿ.

39. ಮುಂಬೈ ಜಾತಕ ಕವಿತೆಯಲ್ಲಿ ತಂದೆ-ತಾಯಿಗಳು ಗೋಚರಿಸುವ ಬಗೆಯನ್ನು ವಿವರಿಸಿ ?

40. ಈ ಕೆಳಗಿನ ಪದ್ಯಭಾಗವನ್ನು ಅರ್ಥೈಸಿಕೊಂಡು ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ.

ಪರುಷದ ಗೃಹದೊಳಗಿದ್ದು ತಿರಿವನೆ ಮನೆಮನೆಯ?

ತೊರೆಯೊಳಗಿದ್ದವನು ತೃಷೆಯಾಗಲರಸುವನೆ ಕೆರೆಯುದಕವ?

ಮಂಗಳಲಿಂಗ ಅಂಗದ ಮೇಲೆ ಇದ್ದು

ಅನ್ಯಲಿಂಗಗಳ ನೆನೆವನೆ ನಿಮ್ಮ ಭಕ್ತನು?

ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ?

ಅ) ಕೆರೆಯುದಕವನ್ನು ಅರಸದವರಾರು? **(1 ಅಂಕ)**

ಆ) ಈ ವಚನದ ಕವಿ ಯಾರು? **(1 ಅಂಕ)**

ಇ) ಮಂಗಳಲಿಂಗದ ಮಹತ್ವವನ್ನು ಕವಿ ಹೇಗೆ ವಿವರಿಸಿದ್ದಾರೆ? **(2 ಅಂಕ)**

(ಆ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. (1x4=4)

41. ಸಿಂಹಬಾಲದ ಕೋತಿಗಳು ಮತ್ತು ಹಾಡುಹಕ್ಕಿಗಳಿಗಾದ ಅನನುಕೂಲಗಳಾವುವು?ವಿವರಿಸಿ.

42. ಚಿನ್ನಮ್ಮ ಬೆಳ್ಳಿಲೋಟವನ್ನು ಮತ್ತೆ ಹೊಳೆಗೆ ಎಸೆಯಲು ಕಾರಣವೇನು? ವಿಶ್ಲೇಷಿಸಿ?

(ಇ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. (1x4=4)

43. ನಿರೂಪಕರು ಕೊಡಲಿ ವಸೂಲಿ ಮಾಡಲು ಹೋಗಲಿಲ್ಲವೇಕೆ? ವಿವರಿಸಿ.

44. ಟೆಲಿಫೋನ್ ಲೈನ್‌ಮನ್ ತಿಪ್ಪಣ್ಣನ ಸಾವಿನ ಸಂದರ್ಭವನ್ನು ವಿವರಿಸಿ?

ಊ-ವಿಭಾಗ

(ಭಾಷಾಭ್ಯಾಸ)

(ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ. (4x2=8)

45. ಕೆಳಗಿನ ಎರಡು ಪದಗಳಿಗೆ **ನಾನಾರ್ಥಗಳನ್ನು** ಬರೆಯಿರಿ.

ನರ, ಗಂಡ, ಮುನಿ

46. ಕೆಳಗಿನ ಎರಡು ಪದಗಳ **ಗುಣವಾಚಕಗಳನ್ನು** ಬರೆಯಿರಿ.

ದುರ್ಜನರು, ಹಾಡುಹಕ್ಕಿ, ದೂರದೃಷ್ಟಿ

47. ಕೆಳಗಿನ ಎರಡು ಕ್ರಿಯಾಪದಗಳ **ಕಾಲವನ್ನು ಗುರುತಿಸಿ** ಬರೆಯಿರಿ.

ನಲಿಯುತ್ತಾ, ತಿಂದನು, ನೋಡಿದಳು

48. ಕೆಳಗಿನ ಎರಡು ಪದಗಳ **ವಿಭಕ್ತಿಗಳನ್ನು** ಹೆಸರಿಸಿ.

ಮನೆಯಲ್ಲಿ, ಹರೆಯಕ್ಕೆ, ನಲ್ಮತೆಯಂ

49. ಕೆಳಗಿನ ಎರಡು **ನುಡಿಗಟ್ಟುಗಳನ್ನು** ನಿಮ್ಮ **ಸ್ವಂತ ವಾಕ್ಯ**ಗಳಲ್ಲಿ ಬಳಸಿ ಬರೆಯಿರಿ.

ದಾರಿದೀಪ, ಕೈಕೊಡು, ರೈಲುಬಿಡು

50. ಯಾವುದಾದರೂ ಎರಡು **ಅನ್ಯದೇಶ್ಯ** ಪದಗಳನ್ನು ಬರೆಯಿರಿ.

(ಆ) ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. (1x4=4)

51. ಅರಣ್ಯ ಸಂರಕ್ಷಣೆಯಲ್ಲಿ ನಮ್ಮ ಪಾತ್ರ.

ಅಥವಾ

ಕಸ ವಿಂಗಡಣೆ – ನಾಗರಿಕರ ಹೊಣೆ

(ಇ) ಯಾವುದಾದರೂ ಒಂದು ವಿಷಯವನ್ನು ಕುರಿತು ಪತ್ರ ಬರೆಯಿರಿ. (1x4=4)

52. ಲವ ಎಂ.ಕೆ./ಸವಿತಾ, ದ್ವಿತೀಯ ಪಿಯುಸಿ, ವಿವೇಕಾನಂದ ಪದವಿ ಪೂರ್ವ ಕಾಲೇಜು, ಕೃಷ್ಣರಾಜಪುರ, ಬೆಂಗಳೂರು-ಈ ವಿಳಾಸ ನಿಮ್ಮದೆಂದು ಭಾವಿಸಿ, ಶಾಂತಕುಮಾರ/ಕಾವ್ಯ, ದ್ವಿತೀಯ ಪಿಯುಸಿ, ಸರ್ಕಾರಿ ಪದವಿ ಪೂರ್ವ ಕಾಲೇಜು, ಕಳಸಾಪುರ, ಚಿಕ್ಕಮಗಳೂರು- ಈ ವಿಳಾಸದಲ್ಲಿರುವ ನಿಮ್ಮ ಗೆಳೆಯ/ಗೆಳತಿಗೆ ನಿಮ್ಮೂರಿನ **ಜಾತ್ರೆಗೆ ಬರುವಂತೆ ಆಹ್ವಾನಿಸಿ** ಪತ್ರ ಬರೆಯಿರಿ.

ಅಥವಾ

ಸುನಿಲ್ ಎನ್.ಸಿ./ ಅನುಷಾ ಎ.ಟಿ., ದ್ವಿತೀಯ ಪಿಯುಸಿ, ಪ್ರೆಸಿಡೆನ್ಸಿ ಪದವಿ ಪೂರ್ವ ಕಾಲೇಜು, ಶಿರಾ, ತುಮಕೂರು ಜಿಲ್ಲೆ- ಈ ವಿಳಾಸದಲ್ಲಿರುವವರು ನೀವೆಂದು ಭಾವಿಸಿ, **ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿ**ಗಳನ್ನು ಪಡೆಯಲು ನಿಮ್ಮ ಕಾಲೇಜಿನ ಪ್ರಾಚಾರ್ಯರಿಗೊಂದು ಪತ್ರ ಬರೆಯಿರಿ.

* * * * * * * *